**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್ ಸಿ ನಂ. 193/2019**

ಸಿಡಬ್ಲ್ಯು 2 ಪಿಡಬ್ಲ್ಯು - 5

ದಿನಾಂಕಃ 06.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

| | |
|---|---|
| ಪೂರ್ಣ ಹೆಸರು | : ಶ್ರೀಶೈಲ ನಿಂಗಪ್ಪಾ ದಾಶ್ಯಾಳ |
| ವಯಸ್ಸು | : 43 ವರ್ಷ |
| ಉದ್ಯೋಗ | : ಕಂದಾಯ ಅಧಿಕಾರಿ ಪುರಸಭೆ ಚಿಕ್ಕೋಡಿ |
| ವಾಸ ಸ್ಥಳ | : ಹಾರೂಗೇರಿ |

**<u>ಮುಖ್ಯ ವಿಚಾರಣೆಃ-</u>** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

ನಾನು ಹಾರೂಗೇರಿ ಪುರಸಭೆಯಲ್ಲಿ ಕಂದಾಯ ಅಧಿಕಾರಿ ಎಂದು 2016 ರಿಂದ 2022 ರವರೆಗೆ ಕರ್ತವ್ಯ ನಿರ್ವಹಿಸಿದ್ದೇನೆ. ಈಗ ನ್ಯಾಯಾಲಯದ ಮುಂದಿರುವ 3ನೇ ಆರೋಪಿಯನ್ನು ನೋಡಿದ್ದೇನೆ. ಎಪ್ರಿಲ 2018 ರಲ್ಲಿ ಪೋಲಿಸರು ನನ್ನನ್ನು ಮತ್ತು ಇನ್ನೊಬ್ಬರನ್ನು ಪೋಲಿಸರು ಮುಗಳಖೋಡ ಕೆನಾಲ ಮುಂದಿರುವ ರಸ್ತೆ ಮೇಲೆ ಕರೆಸಿದ್ದರು. ನಾವು ಬೆಳಗ್ಗೆ 10.30 ಗಂಟೆ ಸುಮಾರಿಗೆ ಅಲ್ಲಿಗೆ ಹೋಗಿದ್ದೇವು. ಅಲ್ಲಿ ಗಾಡಿ ಮೇಲೆ ಶ್ರೀಗಂಧದ ಕಟ್ಟಿಗೆಗಳನ್ನು ಸಾಗಾಟ ಮಾಡುತ್ತಿದ್ದಾರೆಂಬ ಮಾಹಿತಿ ಪೋಲಿಸರಿಗೆ ಬಂದಿತ್ತು. ಹಾಗೂ ಗಾಡಿ ಬರುವದಿದೆ ಎಂದು ಪೋಲಿಸರು ನನಗೆ ತಿಳಿಸಿದ್ದರು.

2) ಕೆನಾಲ ರಸ್ತೆಯಿಂದ ಒಂದು ಮೋಟಾರಸೈಕಲ ಮೇಲೆ ಇಬ್ಬರು ಏನೋ ಬರುತ್ತಿದ್ದರು. ಮೋಟಾರಸೈಕಲ ಮೇಲೆ ಒಂದು ಚೀಲವಿತ್ತು. ಅದನ್ನು ಪೋಲಿಸರು

ಹಿಡಿದರು. ಚೀಲ ನೋಡಿದರು. ಅದರಲ್ಲಿ ಶ್ರೀಗಂಧದ ಕಟ್ಟಿಗೆಗಳು ಇವೆ ಎಂದು ನೋಡಿಕೊಂಡು ಅವುಗಳನ್ನು ತೂಕ ಮಾಡಿದರು. ಅವುಗಳು 5 ಕೆಜಿ ಮೇಲೆ ಇದ್ದವು. ಅವುಗಳನ್ನು ತೂಕ ಮಾಡಿ ಪ್ಯಾಕ ಮಾಡಿದರು. ಒಂದೆರಡು ಕಟ್ಟಿಗೆ ಶಾಂಪಲಗಾಗಿ ತೆಗೆದರು. 01 ಪೋಟೋ ತೆಗೆದರು. ಆಮೇಲೆ ಪಂಚನಾಮೆ ಬರೆದರು. ಪಂಚನಾಮೆಗೆ ಪೋಲಿಸರು ಸಹಿ ಮಾಡಿಕೊಂಡರು. ಸಾಕ್ಷಿಯು ನಿಪಿ 3 ರಲ್ಲಿಯ ತನ್ನ ಸಹಿ ನೋಡಿ ಗುರುತಿಸಿದ್ದು ಸಾಕ್ಷಿ ಸಹಿ ನಿಪಿ 3(ಬಿ) ಎಂದು ಗುರುತಿಸಲಾಯಿತು. ನನಗೆ ಮೋಟಾರಸೈಕಲ ನಂಬರ ಗೊತ್ತಿಲ್ಲ. ಪೋಲಿಸರು ಮೋಟಾರಸೈಕಲ, ಶ್ರೀಗಂಧದ ಕಟ್ಟಿಗೆ ಹಾಗೂ ವಿಠ್ಠಲ ಮಾಂಗ ಇತನನ್ನು ಕರೆದುಕೊಂಡು ಠಾಣೆಗೆ ಬಂದರು. ಜಪ್ತು ಮಾಡುವ ಕಾಲಕ್ಕೆ ಆರೋಪಿಯನ್ನು ಪೋಲಿಸರು ವಿಚಾರಣೆ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಪಂಚನಾಮೆ ಓದಿ ಸಹಿ ಮಾಡಿದ್ದೇನೆ. ಪಂಚನಾಮೆಯಲ್ಲಿ ಆರೋಪಿಯ ಹೆಸರನ್ನು ಪೋಲಿಸರು ಬರೆದಿದ್ದಾರೆ. ಶ್ರೀಗಂಧದ ಕಟ್ಟಿಗೆ ತೂಕ ಮಾಡಿದ್ದಾರೆ. ಇನ್ನೊಬ್ಬ ಆರೋಪಿ ಓಡಿ ಹೋಗಿದ್ದಾನೆಂದು ಪಂಚನಾಮೆಯಲ್ಲಿ ಬರೆದಿದ್ದಾರೆ ಆತನ ಹೆಸರು ನನಗೆ ಗೊತ್ತಿಲ್ಲ. **(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ ಅಭಿಯೋಜಕರು ಕೇಳಿಕೊಂಡಿದ್ದು, ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ-</u>** ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ದಿನಾಂಕಃ 26.04.2018 ರಂದು ಬೆಳಗ್ಗೆ 09.20 ಗಂಟೆಗೆ ಚಾಸಾ 1 ರವರು ಚಾಸಾ 7 ರ ವರ ಮುಖಾಂತರ ನನ್ನನ್ನು ಹಾರೂಗೇರಿ ಪೋಲಿಸ ಠಾಣೆಗೆ ಕರೆಸಿಕೊಂಡರು ಅನ್ನುವದು ಸರಿ. ಅದೇ ರೀತಿ ಚಾಸಾ 3 ಇವರನ್ನು ಸಹ ಅಲ್ಲಿಗೆ

ಕರೆಸಿಕೊಂಡರು ಅನ್ನುವದು ಸರಿ. ಹಾರೂಗೇರಿ ಪೋಲಿಸ ಠಾಣೆಯಲ್ಲಿ ನನಗೆ ಮತ್ತು ಚಾಸಾ 3ಗೆ ಚಾಸಾ 1 ರವರು ಮುಗಳಖೋಡ ಗ್ರಾಮ ಹದ್ದಿಯಲ್ಲಿ ಶ್ರೀಗಂಧದ ಕಟ್ಟಿಗೆ ತುಂಡುಗಳನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದಾರೆ ಈ ಕುರಿತು ಪಂಚರಾಗಿ ಎಂದು ಚಾಸಾ 1 ಕೇಳಿಕೊಂಡರು ಅನ್ನುವದು ಸರಿ. ನಂತರ ಬೆಳಗ್ಗೆ 09.30 ಗಂಟೆಗೆ ನಾನು, ಚಾಸಾ 3, ಚಾಸಾ 1 ಹಾಗೂ ಚಾಸಾ6 ಮತ್ತು 7 ಎಲ್ಲರೂ ಕೂಡಿಕೊಂಡು ಸರ್ಕಾರಿ ಜೀಪನಲ್ಲಿ ಠಾಣೆಯಿಂದ ಹೊರಟು ಬೆಳಗ್ಗೆ 10 ಗಂಟೆಗೆ ಮುಗಳಖೋಡ ಐ ಬಿ ಹತ್ತಿರ ಹೋದೆವು ಅನ್ನುವದು ಸರಿ. ಅಲ್ಲಿ ಐ ಬಿ ಹತ್ತಿರ ಜೀಪ ನಿಲ್ಲಿಸಿ ಮುಗಳಖೋಡ ಊರಿನ ಕಡೆಗೆ ಹೋಗುವ ರಸ್ತೆ ಪಕ್ಕದಲ್ಲಿ ಬ್ರಿಡ್ಜ ಹತ್ತಿರ ನಾವು ಮರೆಯಾಗಿ ನಿಂತುಕೊಂಡೆವು ಅನ್ನುವದು ಸರಿ. ಬೆಳಗ್ಗೆ 10 ಗಂಟೆಗೆ ಕಮಾಣ ಗೇಟ ಕಡೆಯಿಂದ ಜಿ ಎಲ ಬಿ ಸಿ ಕೆನಾಲ ಪಕ್ಕದ ರಸ್ತೆ ಮುಖಾಂತರ ಒಂದು ಮೋಟಾರಸೈಕಲ ಮೇಲೆ ಇಬ್ಬರು ವ್ಯಕ್ತಿಗಳು ಬರುತ್ತಿದ್ದರು ಅನ್ನುವದು ಸರಿ. ಆ ಮೋಟಾರಸೈಕಲನ ಪೆಟ್ರೋಲ ಟ್ಯಾಂಕ ಮೇಲೆ ಒಂದು ನೀಲಿ ಬಣ್ಣದ ಚೀಲ ಇತ್ತು ಅನ್ನುವದು ಸರಿ. ಪೋಲಿಸರು ಸಂಶಯ ಬಂದು ಮೋಟಾರಸೈಕಲ ನಿಲ್ಲಿಸಿದಾಗ ಹಿಂದೆ ಕುಳಿತವನು ಓಡಿ ಹೋದನು ಅನ್ನುವದು ಸರಿ. ಮೋಟಾರಸೈಕಲ ನಡೆಸುತ್ತಿದ್ದ ವ್ಯಕ್ತಿಯ ಹೆಸರು ಕೇಳಲಾಗಿ ಆತನು ತನ್ನ ಹೆಸರು ವಿಠ್ಠಲ ರಾಮಪ್ಪಾ ಮಾಂಗ ಎಂದು ಹೇಳಿದನು ಅನ್ನುವದು ಸರಿ. ಓಡಿ ಹೋದ ವ್ಯಕ್ತಿಯ ಹೆಸರು ಬಸವರಾಜ ಕಲ್ಲಪ್ಪಾ ಗಂಜ್ಯಾಳಿ ಎಂದು ಹೇಳಿದನು ಅನ್ನುವದು ಸರಿ. 1ನೇ ಆರೋಪಿಯನ್ನು ಚೀಲದಲ್ಲಿ ಏನಿದೆ ಎಂದು ಕೇಳಿದಾಗ ಆತನು ತಡವರಿಸುತ್ತಾ ಶ್ರೀಗಂಧದ ಕಟ್ಟಿಗೆ ತುಂಡುಗಳು ಎಂದು ಹೇಳಿದನು. ಬಸವರಾಜ ಸದರಿ ಶ್ರೀಗಂಧದ ಕಟ್ಟಿಗೆ ತುಂಡುಗಳನ್ನು ಕಳ್ಳತನ ಮಾಡಿಕೊಂಡು ತಂದಿರುತ್ತಾನೆ ಅವುಗಳನ್ನು ನಾವಿಬ್ಬರೂ ಕೂಡಿಕೊಂಡು 3ನೇ ಆರೋಪಿಗೆ ಕೊಡಲು ಹೊರಟಿದ್ದೇವು ಎಂದು 1ನೇ ಆರೋಪಿ ಹೇಳಿದನು ಅನ್ನುವದು ಸರಿ.

ನಂತರ ಪೋಲಿಸರು 1ನೇ ಆರೋಪಿಯನ್ನು ದಸ್ತಗೀರ ಮಾಡಿ ಚೀಲದಲ್ಲಿದ್ದ ಎಲ್ಲ ಶ್ರೀಗಂಧದ ಕಟ್ಟಿಗೆಳನ್ನು, ಮೋಟಾರಸೈಕಲ ಮತ್ತು ಚೀಲನ್ನು ವಶಪಡಿಸಿಕೊಂಡರು ಅನ್ನುವದು ಸರಿ. ಶ್ರೀಗಂಧದ ಕಟ್ಟಿಗೆಗಳನ್ನು ತೂಕ ಮಾಡಿದಾಗ ಅವು 5 ಕೆಜಿ 100 ಗ್ರಾಂ ಇದ್ದವು ಅನ್ನುವದು ಸರಿ. ಆ ತುಂಡುಗಳ ಪೈಕಿ ಈಗ ತೋರಿಸಿದ ಮು.ಮಾ.1ಮತ್ತು 2 ಶಾಂಪಲ ಎಂದು ತೆಗೆದರು ಅನ್ನುವದು ಸರಿ. ಅಲ್ಲಿ ಪೋಲಿಸರು ಮುಂಜಾನೆ 10.20 ರಿಂದ 11.30 ಗಂಟೆಯವರೆಗೆ ನಿಪಿ 3 ರಂತೆ ಪಂಚನಾಮೆ ಮಾಡಿ ಅಲ್ಲಿ ನನ್ನ ಸಹಿ ಪಡೆದಿದ್ದಾರೆ ಅನ್ನುವದು ಸರಿ. ಆ ಕಾಲಕ್ಕೆ ನಿಪಿ 4 ಮತ್ತು 5 ಪೋಟೋಗಳನ್ನು ತೆಗೆದಿದ್ದಾರೆ ಅನ್ನುವದು ಸರಿ. ಆ ದಿನ ನನ್ನ ಜೊತೆ ಚಾಸಾ 3 ಪಂಚರಾಗಿದ್ದರು ಅನ್ನುವದು ಸರಿ. 1ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. (1ನೇ ಆರೋಪಿ ಗೈರುಹಾಜರಿದ್ದು ಆತನ ಗುರುತಿಸುವಿಕೆಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿದ್ದಾರೆ).

**<u>ಪಾಟೀ ಸವಾಲುಃ</u>-** 1 ಮತ್ತು 3ನೇ ಆರೋಪಿತರ ಪರ ಶ್ರೀ ಐ ಬಿ ಆರ ವಕೀಲರಿಂದಃ

ನಾನು ಹಾರೂಗೇರಿಯ ಪುರಸಭೆಯಲ್ಲಿ ಕಂದಾಯ ಅಧಿಕಾರಿ ಎಂದು ಕೆಲಸ ಮಾಡುತ್ತಿದ್ದೇನು ಅನ್ನುವದು ಸರಿ. ನಾನು ಸರ್ಕಾರಿ ನೌಕರಸ್ಥ ಅನ್ನುವದು ಸರಿ. ಪಂಚನಾಮೆ ಮಾಡುವುದು ನಮ್ಮ ಕಚೇರಿ ಕೆಲಸದ ವ್ಯಾಪ್ತಿಯಲ್ಲಿ ಇಲ್ಲ ಅನ್ನುವದು ಸರಿ. ಕೆಲಸದ ವೇಳೆಯಲ್ಲಿ ಕಚೇರಿ ಬಿಟ್ಟು ಹೋಗುವಾಗ ಮೇಲಾಧಿಕಾರಿಗಳ ಪರವಾನಗಿ ಪಡೆದು ಹೋಗಬೇಕು ಅನ್ನುವದು ಸರಿ. ಈ ಪ್ರಕರಣದಲ್ಲಿ ಪಂಚನಾಮೆಗೆ ಹೋಗಲು ಮೇಲಾಧಿಕಾರಿಗಳು ಲಿಖಿತ ಪರವಾನಗಿ ಕೊಟ್ಟಿಲ್ಲ ಅನ್ನುವದು ಸರಿ. ಸಾಕ್ಷಿಯು ಮೌಖಿಕವಾಗಿ ತಿಳಿಸಿದರು ಎಂದು ಹೇಳುತ್ತಾರೆ. ನಾನು ಪಂಚನಾಮೆಗೆ ಹೋಗುತ್ತಿದ್ದೇನೆಂದು ಕಚೆರೀಯ ಚಲನವಲನ ರಜಿಸ್ಟರದಲ್ಲಿ ನಮೂದು ಮಾಡಿಲ್ಲ ಅನ್ನುವದು ಸರಿಯಲ್ಲ. ಸದರಿ ಚಲನವಲನ ರಜಿಸ್ಟರನ್ನು ತನಿಖಾಧಿಕಾರಿಗಳು ನನ್ನ ಕಚೇರಿಯಿಂದ ಪಡೆದಿಲ್ಲ. ಪೋಲಿಸರು ನನಗೆ ಪಂಚರಾಗಿ

ಎಂದು ನೋಟಿಸು ಕೊಟ್ಟಿದ್ದಾರೆ. ನೋಟಿಸು ಕೊಟ್ಟಿದ್ದಾರೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ.

2) ದಾಳಿಗೆ ಹೋಗಲು ಪೋಲಿಸರು ನಮ್ಮ ಪುರಸಭೆ ಕಚೇರಿಗೆ ಜೀಪ ತೆಗೆದುಕೊಂಡು ಬಂದಿದ್ದರು. ನಾನು ನಮ್ಮ ಪುರಸಭೆ ಕಚೇರಿಯಿಂದ ಅವರ ಜೊತೆಗೆ ದಾಳಿಗೆ ಹೋದೆನು. ನಾನು ದಾಳಿಗೆ ಹೋಗುತ್ತಿದ್ದ ಬಗ್ಗೆ ಪೋಲಿಸರು ಅವರ ಠಾಣಾ ದಿನಚರಿ ರಜಿಸ್ಟರದಲ್ಲಿ ಬರೆದಿಲ್ಲ.

3) ದಾಳಿ ಮಾಡಿದ ಸ್ಥಳದಲ್ಲಿ ಜನರ ವಹಿವಾಟು ಇತ್ತು ಅನ್ನುವದು ಸರಿ. ಅಲ್ಲಿರುವ ಜನರಿಗೆ ಪಂಚರಾಗಿ ಬರಲು ಪೋಲಿಸರು ನನ್ನ ಸಮಕ್ಷಮ ಕೇಳಿಲ್ಲ. ಜೀಪ ನಂಬರ ನೆನಪಿಲ್ಲ ಹಾಗೂ ಜೀಪ ಯಾರು ಚಲಾಯಿಸುತ್ತಿದ್ದರು ಗೊತ್ತಿಲ್ಲ. ಶ್ರೀಗಂಧದ ಕಟ್ಟಿಗೆಗಳು 5 ಕೆಜಿ 100 ಗ್ರಾಂ ಇದ್ದವು. ಶಾಂಪಲಗಾಗಿ ತೆಗೆದ ಶ್ರೀಗಂಧದ ಕಟ್ಟಿಗೆಗಳ ತೂಕ ಹೇಳಲು ಬರುವದಿಲ್ಲ. ಯಾರು ತೂಕ ಮಾಡಿದರು ಗೊತ್ತಿಲ್ಲ. 1ನೇ ಆರೋಪಿಯನ್ನು ಯಾವ ಪೋಲಿಸರು ಹಿಡಿದರು ಎಂದು ನಿರ್ಧಿಷ್ಟ ಹೇಳಲು ಬರುವದಿಲ್ಲ. ಓಡಿ ಹೋದ ಆರೋಪಿಯನ್ನು ಯಾರು ಬೆನ್ನು ಹತ್ತಿದ್ದರು ಗೊತ್ತಿಲ್ಲ. ದಾಳಿ ಕಾಲಕ್ಕೆ ಪೋಲಿಸರು ಪಂಚನಾಮೆಯ ಪ್ರಿಂಟನ್ನು ಜೀಪನಲ್ಲಿ ತೆಗೆದರು. ಪ್ರಿಂಟರನ್ನು ಯಾವುದಕ್ಕೆ ಜೋಡಿಸಿದ್ದರು ನನಗೆ ಗೊತ್ತಿಲ್ಲ. ಪಂಚನಾಮೆ ಟೈಪ ಮಾಡುವಾಗ ನಾನು ಜೀಪನಲ್ಲಿದ್ದೇನು. ಯಾರು ಟೈಪ ಮಾಡಿದರು ಹೆಸರು ನನಗೆ ಗೊತ್ತಿಲ್ಲ. ಪಂಚನಾಮೆ, ಜಪ್ತು ಹಾಗೂ ಟೈಪ ಮಾಡಲು ಸುಮಾರು ಒಂದೂವರೆ ಗಂಟೆಯಾಯಿತು. ನಾನು ಹೇಳಿದಂತೆ ಪಂಚನಾಮೆ ಟೈಪ ಮಾಡಿ ಎಂದು ಪೋಲಿಸರಿಗೆ ನಾನು ಹೇಳಲಿಲ್ಲ.

4) ಈಗ ನ್ಯಾಯಾಲಯದ ಮುಂದಿರುವ 3ನೇ ಆರೋಪಿಯನ್ನು ದಾಳಿ ಕಾಲಕ್ಕೆ ನೋಡಿದ್ದೇನೆ. 3ನೇ ಆರೋಪಿ ಮೋಟಾರಸೈಕಲ ಮೇಲಿದ್ದನು.

5)  ದಾಳಿ ಕುರಿತು ನಾನು ಪೋಲಿಸರೊಂದಿಗೆ ಹೋಗಿಲ್ಲ ಅನ್ನುವದು ಸರಿಯಲ್ಲ. ಪೋಲಿಸರು ನನಗೆ ಸ್ಥಳದಲ್ಲಿ ಕರೆದು ಪೋಟೋ ಮಾತ್ರ ತೆಗೆದಿದ್ದಾರೆ ಅನ್ನುವದು ಸರಿಯಲ್ಲ. ಅಲ್ಲಿ ಎಷ್ಟು ವಸ್ತುಗಳನ್ನು ಜಪ್ತು ಮಾಡಿದರು ನನಗೆ ನಿರ್ಧಿಷ್ಟವಾಗಿ ಹೇಳಲು ಬರುವದಿಲ್ಲ. ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ.

**ಮರು ಮುಖ್ಯ ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ ಅಂತಾ ಹೇಳುತ್ತಾರೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.